ಮಿಸಲೇನಿಯಸ್ ನಂಃ 202/2023
ಆರ್.ಡಬ್ಲೂ ನಂಃ 01

ದಿನಾಂಕಃ 14-03-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ 1 ನೇ ಎದುರುದಾರರ ಪರವಾಗಿ ಶ್ರೀ ಎಸ್ ಆರ್ ಕೆ ವಕೀಲರಿಂದಃ**

ನಾನು ಈ ಪ್ರಕರಣದಲ್ಲಿ ಅರ್ಜಿದಾರನಿದ್ದು ನನ್ನ ಮುಖ್ಯ ವಿಚಾರಣೆಯಾಗಿ ಪ್ರಮಾಣಪತ್ರ ಸಲ್ಲಿಸಿದ್ದೇನೆ ಹಾಗೂ ಅದರಲ್ಲಿರುವ ಸಹಿಗಳು ನನ್ನದಾಗಿರುತ್ತದೆ. ಅದರಲ್ಲಿ ಬರೆದ ವಿಷಯಗಳು ಸತ್ಯವಾಗಿದೆ.

ಅರ್ಜಿದಾರರು ಹಾಜರುಪಡಿಸಿದ ದಾಖಲೆಗಳನ್ನು ಈ ಕೆಳಗಿನಂತೆ ನಿಶಾನೆಯಾಗಿ ಗುರುತಿಸಲಾಯಿತು.

| **ಅ.ನಂ.** | **ದಾಖಲೆಗಳ ವಿವರ** | **ನಿಶಾನೆ ಸಂಖ್ಯೆ** |
|---|---|---|
| 1 | 2 ಫಾರ್ಮ ನಂ.8 ಎ | ನಿಆರ್-1 ಮತ್ತು ನಿಆರ್-2 |
| 2 | ಡೈರಿ ಎಕ್ಸ್ಟ್ರಾಕ್ಟ್ | ನಿಆರ್-3 |
| 3 | ಸರ್ವೆ ನಂ.38/1 ರ ಪಹಣಿ ಪತ್ರಿಕೆ | ನಿಆರ್-4 |
| 4 | ಸರ್ವೆ ನಂ.38/3 ಎ ದ್ದರ ಪಹಣಿ ಪತ್ರಿಕೆ | ನಿಆರ್-5 |
| 5 | ವಾಟ್ನಿ ಪತ್ರ | ನಿಆರ್-6 |

**ಪಾಟಿ ಸವಾಲುಃ ಮಾನ್ಯ ಡಿ ಜಿ ಪಿ ರವರಿಂದಃ ಅರ್ಜಿದಾರರ ಪರಃ**

ನಾನು ಎಸ್‌ಎಸ್‌ಎಲ್‌ಸಿವರೆಗೆ ಓದಿರುತ್ತೇನೆ. ನನ್ನ ಮುಖ್ಯವಿಚಾರಣೆ ಪ್ರಮಾಣಪತ್ರದ ಎಲ್ಲಾ ವಿಷಯಗಳು ಗೊತ್ತು. ಸರ್ವೆ ನಂ.38/1 ರ ಪೈಕಿ 34 ಗುಂಟೆ 14 ಆಣೆ ಮತ್ತು ಸರ್ವೆ ನಂ.38/3 ಅ ಪೈಕಿ 34 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಂಡಿರುತ್ತಾರೆ. ಸದರಿ ಸರ್ವೆ ನಂಬರುಗಳು ನಮ್ಮ ಪೂರ್ವಜರ ಆಸ್ತಿಗಳು ಎಂದರೆ ಸರಿ. ನಾವು ಇಬ್ಬರು ಗಂಡು ಮಕ್ಕಳು ಮತ್ತು ಒಬ್ಬಳು ಸಹೋದರಿ ಇರುತ್ತೇವೆ. ನಮ್ಮ ತಂದೆಯವರ ವಾರ್ಸಾ ಪ್ರಮಾಣಪತ್ರ ಪಡೆದುಕೊಂಡಿರುತ್ತೇವೆ. ನಮ್ಮ ತಂದೆ 15-01-1982 ರಲ್ಲಿ ತೀರಿಕೊಂಡಿರುತ್ತಾರೆ. ನಮ್ಮ ತಂದೆ ತೀರಿಕೊಂಡ ನಂತರ ಹಿರಿಯರ ಸಮಕ್ಷಮ ಪಾಲು ವಾಟ್ನಿ ಮಾಡಿಕೊಂಡಿರುತ್ತೇವೆ.

ಭೂಸ್ವಾಧೀನಪಡಿಸಿಕೊಂಡ ನಂತರ ನಮ್ಮ ಸಹೋದರರು ಪರಿಹಾರವನ್ನು ನಮಗೆ ಕೊಡಬೇಡಿ ಎಂದು ತಕರಾರು ಸಲ್ಲಿಸಿದ್ದರು ಎಂದರೆ ಸರಿ. ಭೂಸ್ವಾಧೀನಾಧಿಕಾರಿಗಳು ಪರಿಹಾರ ಹಣವನ್ನು ನ್ಯಾಯಾಲಯಕ್ಕೆ ಡೆಪಾಸಿಟ ಮಾಡಿರುತ್ತಾರೆ ಎಂದರೆ ಸರಿ.

**ಪಾಟಿ ಸವಾಲುಃ ಶ್ರೀ ಟಿ ಆರ್ ಎ ವಕೀಲರಿಂದಃ 2 ನೇ ಎದುರುದಾರರ ಪರಃ**

ಪಾಟೀ ಸವಾಲು ಮಾಡಲು ಸಮಯ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಉಖ್ತಲೇಖದ ಅನ್ವಯ ಬೆರಳಚ್ಚುಗಾರರು ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿ ಪಡೆದುಕೊಳ್ಳಲಾಯಿತು)**

ಓ ಹೇ ಕೆ ಸರಿ ಇದೆ.

(ಕುಡವಕ್ಕಲಿಗೇರ ಎಂ ಜಿ)
1 ನೇ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ
ನ್ಯಾಯಾಧೀಶರು, ಬೆಳಗಾವಿ.